ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).—

ಅ) ರಾಜ್ಯದಲ್ಲಿ ದೊರೆಯುವ ಚಿನ್ನದ ಅದಿರಿನ ನಿಕ್ಷೇಪವನ್ನು ಪತ್ತೆ ಹಚ್ಚುವ ಕಾರ್ಯವನ್ನು ಭಾರತ ಸರ್ಕಾರದ ಎಂ.ಇ.ಸಿ.ಎಲ್. ಸಂಯೋಜನೆಯೊಡನೆ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ದವರು ಸಮೀಕ್ಷೆ ನಡೆಸುತ್ತಿದ್ದಾರೆ. ಇಂಗಲ್‌ದಾಳ್‌ನಲ್ಲಿ ತಾಮ್ರದ ನಿಕ್ಷೇಪದ ಬಗ್ಗೆ ಸಮೀಕ್ಷೆ ನಡೆಸಿದಾಗ ಅಲ್ಲಿ ಕೊರೆದ ಭಾವಿಗಳಲ್ಲಿ ಚಿನ್ನದ ಅದಿರು ದೊರೆಯುವ ಸೂಚನೆ ಕಂಡು ಬಂದಿದೆ. ಈ ದಿಸೆಯಲ್ಲಿ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ಮತ್ತು ಹಟ್ಟಿ ಚಿನ್ನದ ಕಂಪೆನಿಯವರು ಇನ್ನೂ ಹೆಚ್ಚಿನ ಪರೀಕ್ಷೆ ನಡೆಸುತ್ತಿದ್ದಾರೆ.

ಆ) ಇನ್ನೂ ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅರಣ್ಯ ಉತ್ಪನ್ನ ಕೈಗಾರಿಕಾ ಮಂಡಳಿ

೫೨೪. ಶ್ರೀಮತಿ ಮುಕ್ತರುನ್ನಿಸಾ (ನರಸಿಂಹರಾಜ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಅರಣ್ಯ ಉತ್ಪನ್ನ ಕೈಗಾರಿಕಾ ಮಂಡಳಿಯನ್ನು ಎಂದು ರಚಿಸಿತು.

ಆ) ಸದರೀ ಮಂಡಳಿಗೆ ರೂಪಿಸಲಾದ ಕಾರ್ಯಕ್ರಮ ಈ ತನಕದ ವಾಸ್ತವಿಕ ಪ್ರಗತಿ ಮತ್ತು ರಚಿಸಿದಂದಿನಿಂದ ಈ ತನಕ ಮಾಡಲಾದ ಲಾಭವನ್ನು ಸೂಚಿಸುವುದು.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅರಣ್ಯ ಉತ್ಪನ್ನ ಕೈಗಾರಿಕಾ ಮಂಡಳಿಯನ್ನು ಸರ್ಕಾರವು ರಚಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಹಾಲು ಉತ್ಪಾದಕರ ಸಹಕಾರ ಸಂಘ

೫೨೮. ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ).—ಮಾನ್ಯ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜೂನ್ ೧೯೮೭ರ ಅಂತ್ಯಕ್ಕೆ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಂಖ್ಯೆಯೆಷ್ಟು ?

ಆ) ಜೂನ್ ೧೯೮೦ರ ಅಂತ್ಯಕ್ಕೆ ನೋಂದಾಯಿಸಲ್ಪಟ್ಟ ಇಂತಹ ಸಂಘಗಳ ಸಂಖ್ಯೆಯೆಷ್ಟು ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ೪೦೨೮ (''ಆನಂದ್'' ಮಾದರಿ) ಸಂಘಗಳು ನೋಂದಾಯಿಸಲ್ಪಟ್ಟಿವೆ.

ಆ) ೧೧೪೬ (''ಆನಂದ್'' ಮಾದರಿ) ಸಂಘಗಳು ನೋಂದಾಯಿಸಲ್ಪಟ್ಟಿವೆ.

ವಿದ್ಯುತ್ಪಾದನೆ ಮತ್ತು ಬಳಕೆಯ ಬಗ್ಗೆ

೬೩೪. ಶ್ರೀ ರಮೇಶ್‌ಕುಮಾರ್ (ಶ್ರೀನಿವಾಸಪುರ). — ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮುಖ್ಯ ವಿದ್ಯುತ್ ಉತ್ಪಾದನಾ ಮೂಲಗಳಾವುವು ? (ಜಲ, ಶಾಖೋತ್ಪನ್ನ ಯೋಜನೆಗಳು)

ಆ) ರಾಜ್ಯದಲ್ಲಿ ಇವುಗಳಿಂದ ೧೯೭೭ರಲ್ಲಿ ಉತ್ಪಾದಿಯಾದ ವಿದ್ಯುತ್ ಪ್ರಮಾಣವೆಷ್ಟು ?